**ವಿಶ್ವಾತ್ಮದ ದಿವ್ಯಾಭಿವ್ಯಕ್ತಿ.** ಆಧ್ಯಾತ್ಮಿಕ ಪರಿವರ್ತನೆಯು ಹಲವು ಹಂತಗಳಲ್ಲಿ ನಡೆಯುವ ಪ್ರಕ್ರಿಯೆ. ಪ್ರತಿಯೊಂದು ಹಂತವೂ ಜೀವಿಯು ಭಗವಂತನ ಬಗ್ಗೆ ತೋರುವ ಮನೋಭಾವದಲ್ಲಿನ ಪರಿವರ್ತನೆಯನ್ನೇ ಲಕ್ಷಣವಾಗಿ ಹೊಂದಿದೆ. ಬಂಗಾಳದ ವೈಷ್ಣವ ಸಂಪ್ರದಾಯವನ್ನು ಅನುಸರಿಸುತ್ತಾ, ಸ್ವಾಮೀಜಿ ಈ ಹಂತಗಳನ್ನು ಹೀಗೆ ಗುರುತಿಸುತ್ತಾರೆ: **ಪೂಜ್ಯಭಾವನೆ, ಪ್ರೀತಿ** (ಭಗವದ್ವಿಷಯದಲ್ಲಿ ಆನಂದವನ್ನು ಪಡೆಯುವುದು), **ವಿರಹ** (ಪ್ರಿಯ ವ್ಯಕ್ತಿಯ ಅಗಲಿಕೆಯಿಂದಾಗುವ ಉತ್ಕಟ ವೇದನೆ), **ತದರ್ಥಪ್ರಾಣಸಂಸ್ಥಾನ** (ಪ್ರಿಯತಮನಿಗೋಸ್ಕರವಾಗಿಯೇ ತನ್ನ ಪ್ರಾಣವನ್ನು ಉಳಿಸಿಕೊಂಡಿರುವುದು) ಮತ್ತು ಕಡೆಗೆ ಅಂತಿಮ ಐಕ್ಯತೆಯು ಉಂಟಾಗುವ **ತದೀಯತಾ** (ಅವನಂತೆಯೇ ಆಗಿ ಬಿಡುವುದು).

ಭಕ್ತನು ಈ ಕೊನೆಯ ಹಂತವನ್ನು ಮುಟ್ಟಿದಾಗ ಎಲ್ಲ ಬಂಧನಗಳಿಂದ ಮುಕ್ತನಾಗುತ್ತಾನೆ; ಇಡೀ ಪ್ರಪಂಚವು ಎಲ್ಲ ಜೀವಿಗಳ ಹೃದಯದಲ್ಲಿ ನೆಲೆಸಿರುವ ಪ್ರಿಯತಮನಾದ ಭಗವಂತನಿಗೇ ಸೇರಿರುವುದರಿಂದ ಅದನ್ನೂ ಪ್ರೀತಿಸುತ್ತಾನೆ. ಈ ಉತ್ಕಟ ಹಾಗೂ ಸರ್ವಾಂಗತನ್ಮಯತೆಯ ಪ್ರೀತಿಯ ಫಲವಾಗಿ, ಪರಿಪೂರ್ಣ ಶರಣಾಗತಿ ಉಂಟಾಗುತ್ತದೆ; ತನಗೆ ವಿರುದ್ಧವಾದುದೇನೂ ನಡೆಯುವುದಿಲ್ಲವೆಂಬ ದೃಢವಿಶ್ವಾಸ ಮೂಡುತ್ತದೆ. ಇದನ್ನೇ **ಅಪ್ರಾತಿಕೂಲ್ಯ** ಎನ್ನುತ್ತಾರೆ. ಆಗ ಆ ಪ್ರೇಮಜೀವಿಯು, ನೋವು ಬಂದಾಗ, "ನೋವೇ, ಸ್ವಾಗತವು ನಿನಗೆ" ಎಂದು ಹೇಳಲೂ, ಸಂಕಟವು ಪ್ರಾಪ್ತವಾದರೆ, "ಸಂಕಟವೇ ಸ್ವಾಗತ ನಿನಗೆ, ನೀನೂ ಪ್ರಿಯತಮನ ಒಂದು ಸ್ವರೂಪವೇ ಆಗಿದ್ದೀಯೆ" ಎಂದು ಸ್ವಾಗತಿಸಲೂ ಶಕ್ತನಾಗುತ್ತಾನೆ.

ಸ್ವಾಮೀಜಿ ಈ ತದೀಯತಾ ಹಂತದ ಭಾವನೆಯನ್ನು ಒಂದು ಸಾರ್ವತ್ರಿಕ ಜೀವನತತ್ತ್ವವನ್ನಾಗಿ ಅಭಿವೃದ್ಧಿಪಡಿಸಿದರು. ಇದು ಅತ್ಯುನ್ನತವಾದ ಅವರ ಸ್ವಂತ ಅನುಭೂತಿಗೆ ಅನುಗುಣವಾಗಿದ್ದಿತು. ಅದರಲ್ಲಿ ಭಗವತ್ಪ್ರೇಮ ಮತ್ತು ಮಾನವಪ್ರೇಮಗಳು ಏಕಪ್ರಕಾರವಾಗಿದ್ದವು ಮಾತ್ರವಲ್ಲ, ಒಂದೇ ಆಗಿದ್ದವು. ತನ್ನ ಹೃದಯದಲ್ಲಿ ಭಗವಂತನ ಪಾದಪದ್ಮಗಳನ್ನು ಸಾಕ್ಷಾತ್ಕರಿಸಿಕೊಂಡ ಭಕ್ತನು ವಾಮನಮೂರ್ತಿಯ ಪಾದಗಳಂತೆ ಅವು ವಿಶ್ವವ್ಯಾಪಕವಾಗುವುದನ್ನು ಕಂಡುಕೊಳ್ಳುತ್ತಾನೆ. ಅವನೆತ್ತ ಕಣ್ಣುಹಾಯಿಸಿದರೂ ಅಲ್ಲಿ ಭಗವಂತನ ಜ್ಯೋತಿರ್ಮಯ ಸಾನ್ನಿಧ್ಯವನ್ನೇ ದರ್ಶಿಸುತ್ತಾನೆ. ಅವನ ಪಾಲಿಗೆ ಪ್ರತಿಯೊಬ್ಬ ಮನುಷ್ಯನೂ ಭಗವಂತನ ಪರಮಶ್ರೇಷ್ಠ ಆರಾಧನಾಸ್ಥಾನವಾಗುತ್ತಾನೆ; ಪ್ರತಿಯೊಂದು ಸೇವಾಕಾರ್ಯವೂ ಭಗವದಾರಾಧನೆಯಾಗಿ ಪರಿಣಮಿಸುತ್ತದೆ. ಈ ಭಕ್ತಿಭಾವದ ಶಿಖರಾನುಭವದಲ್ಲಿ ಸ್ವಾಮೀಜಿ, ಜ್ಞಾನ, ಭಕ್ತಿ ಮತ್ತು ಯೋಗಗಳ ಸಮನ್ವಯವನ್ನು ಕಂಡುಕೊಳ್ಳುತ್ತಾರೆ. ಈ ಬಗ್ಗೆ ಅವರು ಹೀಗೆ ಹೇಳುತ್ತಾರೆ:

**"ಭರತಖಂಡದ ದರ್ಶನ ಮತ್ತು ಧರ್ಮದ ಏಕಮಾತ್ರ ಗುರಿಯೇ ವಿಶ್ವವ್ಯಾಪಿಯಾಗಿರುವ ಸಾಮಾನ್ಯ ತತ್ತ್ವವನ್ನು ಕಂಡುಹಿಡಿಯುವುದು. ಯಾವುದನ್ನು ಅರಿತರೆ ಎಲ್ಲವನ್ನೂ ಅರಿಯಬಹುದೋ, ಅಂತಹ ಅದ್ವಿತೀಯವಾದ, ಸರ್ವಸಾಮಾನ್ಯವಾದ ಪೂರ್ಣತತ್ತ್ವವನ್ನು ಅರಿಯುವುದೇ ಜ್ಞಾನಯೋಗಿಯ ಗುರಿ. ಯಾರನ್ನು ಪ್ರೀತಿಸಿದರೆ ಇಡೀ ವಿಶ್ವವನ್ನು ಪ್ರೀತಿಸಬಹುದೋ ಅಂತಹ, ಎಲ್ಲರ ಹೃದಯಾಂತರಾಳದಲ್ಲಿರುವ, ಚಿನ್ಮಾತ್ರಗೋಚರನಾದ ವ್ಯಕ್ತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಭಕ್ತನು ಬಯಸುವನು. ಯಾವುದನ್ನು ನಿಗ್ರಹಿಸಿದರೆ ಇಡೀ ವಿಶ್ವವನ್ನು ನಿಗ್ರಹಿಸಬಹುದೋ ಅದನ್ನು ವಶಮಾಡಿಕೊಳ್ಳಬೇಕೆಂದು ಯೋಗಿಯು ಆಶಿಸುವನು."**

*(ಕೃತಿಶ್ರೇಣಿ, ೧: ೨೩೨)*

(ಮುಂದುವರಿಯುವುದು)

## ರಮಣೀಯ ಚಾರಿತ್ರ್ಯದ ರಮಣಯ್ಯ

ಸ್ವಾಮಿ ವಿವೇಕಾನಂದರು ಎಲ್ಲರಿಗೂ ಸ್ಫೂರ್ತಿಯನ್ನು ನೀಡುವ ಮಹಾಪುರುಷರು. ಹಾಗೆ ಅವರಿಂದ ಪ್ರೇರಣೆಯನ್ನು ಪಡೆದು ಬದುಕಿನಲ್ಲಿ ಮುಂದೆ ಬಂದ ವ್ಯಕ್ತಿಯೊಬ್ಬರ ಸತ್ಯಕಥೆ ಇದು: ಶ್ರೀ ರಮಣಯ್ಯ ಹುಟ್ಟಿದ್ದು ಬಡ ಕುಟುಂಬದಲ್ಲಿ; ಆಂಧ್ರಪ್ರದೇಶದ ಒಂದು ಚಿಕ್ಕ ಹಳ್ಳಿಯಲ್ಲಿ. ೧೯೮೫ ರಲ್ಲಿ ಇವರು ಚೆನ್ನೈನಲ್ಲಿರುವ ಶ್ರೀರಾಮಕೃಷ್ಣ ಮಠಕ್ಕೆ ಸೆಕ್ಯುರಿಟಿ ಗಾರ್ಡ್ ಆಗಿ ಸೇರಿದರು. ಅನಂತರ ತೋಟದ ಕೆಲಸ ಮಾಡುತ್ತಿದ್ದರು. ಅತ್ಯಂತ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದ ಅವರನ್ನು ಕಂಡರೆ ಎಲ್ಲರಿಗೂ ಪ್ರೀತಿ. ಹಾಗೆಯೇ ಮಠದ ಅಡುಗೆ ಮನೆ, ಔಷಧಾಲಯಗಳಲ್ಲೂ ಅವರು ಕೆಲಸ ಮಾಡಿ ಅನುಭವ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ತಮ್ಮ ಶಿಕ್ಷಣವನ್ನೂ ಮುಂದುವರಿಸುತ್ತಿದ್ದ ರಮಣಯ್ಯ, ಚೆನ್ನೈ ಮಠದ ಡಿ.ಟಿ.ಪಿ. ವಿಭಾಗಕ್ಕೆ ಸೇರಿಕೊಂಡರು. ಅಲ್ಲಿ, ತೆಲುಗು, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕಂಪೋಸಿಂಗ್ ಮಾಡುವುದನ್ನು ಕಲಿತುಕೊಂಡರು. ಮುಂದುವರಿದು, ಕಂಪ್ಯೂಟರ್‌ನಲ್ಲಿ ಪುಟವಿನ್ಯಾಸವನ್ನು ಮಾಡುವುದನ್ನೂ ಅವರು ರೂಢಿಸಿಕೊಂಡರು.

ಹೀಗೆ ರಮಣಯ್ಯ ಚೆನ್ನೈನ ಶ್ರೀರಾಮಕೃಷ್ಣ ಮಠದಲ್ಲಿ ೨೫ ವರ್ಷಗಳಿಗಿಂತಲೂ ಹೆಚ್ಚು ಕಾಲ ಸೇವೆ ಸಲ್ಲಿಸುತ್ತ ಇದ್ದಾರೆ. ಈ ಸಮಯದಲ್ಲಿ ಅವರು ಸ್ವಾಮಿ ವಿವೇಕಾನಂದರ ಜೀವನವನ್ನು ಮತ್ತು ಚಿಂತನೆಗಳನ್ನು ಅಧ್ಯಯನ ಮಾಡಿ ಕರಗತ ಮಾಡಿಕೊಂಡರು. ಎಂ.ಎ. ಪದವಿಯನ್ನು ಪಡೆದುಕೊಂಡ ರಮಣಯ್ಯ ತಮ್ಮ ಡಾಕ್ಟರೇಟ್ ಪದವಿಯ ಸಂಶೋಧನೆಗಾಗಿ ಆರಿಸಿಕೊಂಡ ವಿಷಯ, "ವಿವೇಕಾನಂದರ ಮಾನವಪ್ರೇಮ." ಈ ವಿಷಯದ ಮೇಲೆ ಮಹಾಪ್ರಬಂಧವನ್ನು ಸಲ್ಲಿಸಿದ ಅವರು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಅದಕ್ಕಾಗಿ ನಡೆದ ಮೌಖಿಕ ಪರೀಕ್ಷೆಯಲ್ಲಿ ತಮ್ಮ ಸಂಶೋಧನೆಯ ಬಗ್ಗೆ ಅವರಾಡಿದ ಮಾತುಗಳ ಸಂಕ್ಷಿಪ್ತ ರೂಪ ಇದು: " ಮಾನವಕುಲದ ಕಲ್ಯಾಣಕ್ಕಾಗಿ ಹಲವಾರು ಮಹಾಪುರುಷರು ಚಿಂತನೆಗಳನ್ನು ನಡೆಸಿದ್ದಾರೆ. ಅವರಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರು. 'ವಿವೇಕ' ಮತ್ತು 'ಆನಂದ' – ಈ ಎರಡು ಪದಗಳು ಅವರ ವ್ಯಕ್ತಿತ್ವದ ಸ್ವರೂಪ ಸ್ವಭಾವಗಳನ್ನು ಸೂಚಿಸುತ್ತವೆ. ಸನಾತನ ಧರ್ಮದ ಪುನರುಜ್ಜೀವನದಲ್ಲಿ ಅವರ ಪಾತ್ರ ಗಣನೀಯ. ಕೇವಲ ೩೯ ವರ್ಷ ಕಾಲ ಬದುಕಿದ್ದ ಅವರ ಜೀವನ ಕ್ಷಣಕಾಲ ಪ್ರಜ್ವಲಿಸಿ ಮರೆಯಾಗುವ ಮಿಂಚಿನಂತೆ ಇದೆ. ಉತ್ತಮ ಉದ್ದೇಶಗಳು ಒಬ್ಬನ ಬಾಳನ್ನು ಉನ್ನತವಾದ ಮಟ್ಟಕ್ಕೆ ಒಯ್ಯುತ್ತವೆ. ಇದಕ್ಕೆ ಸ್ವಾಮಿ ವಿವೇಕಾನಂದರ ಬಾಳೇ ಸಾಕ್ಷಿ. ಅವರ ಚಿಂತನೆಗಳು ಪರಿಪೂರ್ಣ ಮಾನವನಾಗುವ ದಾರಿಯಲ್ಲಿ ನಮ್ಮನ್ನು ಕೊಂಡೊಯ್ಯುತ್ತವೆ." ಇತ್ತೀಚಿಗೆ ಚೆನ್ನೈ ಶ್ರೀರಾಮಕೃಷ್ಣ ಮಠದಲ್ಲಿ ಶ್ರೀ ರಮಣಯ್ಯ ಅವರಿಗೆ ರೂ.೫೦,೦೦೦ ಗಳ ಕೊಡುಗೆಯೊಂದಿಗೆ 'ವಿವೇಕಾನಂದ ವಿದ್ಯಾಪ್ರಶಸ್ತಿ' ಯನ್ನು ನೀಡಿ ಸನ್ಮಾನಿಸಲಾಯಿತು.

ವಿಜ್ಞಾನ : ವಿಚಾರ

# ಪ್ರಾಚೀನ ಪಾಶ್ಚಾತ್ಯ ಚಿಂತನೆಯ ಸಮೀಕ್ಷೆ

ಡಾ. ಪ್ರಭುಶಂಕರ

**ಭೌತಿಕ ಮತ್ತು ಆಧ್ಯಾತ್ಮಿಕ ಅನ್ವೇಷಣೆಯು ಪಾಶ್ಚಾತ್ಯ ಜಗತ್ತಿನಲ್ಲಿ ಆರಂಭಗೊಂಡ ಪಕ್ಷಿನೋಟ ಈ ಲೇಖನದಲ್ಲಿದೆ. ಇದೇ ಆಧುನಿಕ ವಿಜ್ಞಾನದ ಉಗಮಕ್ಕೆ ಎಡೆಮಾಡಿಕೊಟ್ಟಿತು. ಅದರ ವಿಸ್ತೃತ ಪರಿಚಯ ಮಾಡಿಕೊಟ್ಟಿರುವ ಲೇಖಕರು ಕನ್ನಡದ ಪ್ರಸಿದ್ಧ ಸಾಹಿತಿಗಳು; ಸುದೀರ್ಘಕಾಲದಿಂದಲೂ ರಾಮಕೃಷ್ಣ ಆಶ್ರಮದ ಆತ್ಮೀಯ ಹಿತೈಷಿಗಳು.**

## ಸೃಷ್ಟಿಯ ಮೂಲ

**ಪ**ಶ್ಚಿಮದಲ್ಲಿ ತಾತ್ವಿಕ ಚಿಂತನೆ ಪ್ರಾರಂಭವಾಗುವುದು ಗ್ರೀಕ್ ತತ್ವಜ್ಞಾನಿಗಳಿಂದ. ಕ್ರಿ. ಪೂ. ಸುಮಾರು ೬೦೦ ರಲ್ಲಿದ್ದ ಮಿಲೆಟಸ್‌ನ ಥೇಲ್ಸ್ ಎನ್ನುವವನು ಜಗತ್ತಿನ ಸೃಷ್ಟಿಯ ಸಮಸ್ಯೆಗೆ ಉತ್ತರ ನೀಡಲು ಪ್ರಯತ್ನಿಸಿದ ಮೊದಲ ತತ್ವಚಿಂತಕ ಎಂದು ಹೇಳಬಹುದು. ಅವನ ಪ್ರಕಾರ ಮೊದಲು ಇದ್ದದ್ದು 'ನೀರು'. ಅದು ಗಟ್ಟಿಯಾದಾಗ ಹಿಮದ ಗಡ್ಡೆಯಾಗುವುದು, ಕಾಯಿಸಿದಾಗ ಹಬೆಯಾಗುವುದು. ಇವುಗಳನ್ನು ಕಂಡು ನೀರೇ ಎಲ್ಲ ಸೃಷ್ಟಿಗೆ ಕಾರಣ ಎಂದು ಅವನು ಹೇಳಿದ. ಮುಂದಿನ ಚಿಂತಕರು ಚಲನೆಯನ್ನೊಳಗೊಂಡ ವಸ್ತುರಾಶಿಯೇ (mass) ಈ ಸೃಷ್ಟಿ ಎಂದರು. ಹಾಗೆಯೇ ಈ ಎಲ್ಲಕ್ಕೂ ಕಾರಣವಾದ ಮೂಲವಸ್ತು ವಾಯು ಎಂದರು. ಪೈಥಾಗರಸ್ ಎಂಬ ಚಿಂತಕನೂ, ಅವನ ಅನುಯಾಯಿಗಳೂ ಸಂಖ್ಯೆಗಳೇ ಎಲ್ಲಕ್ಕೂ ಕಾರಣ ಎಂದರು. ಹೆರಾಕ್ಲಿಟಸ್ ಅಗ್ನಿಯೇ ಕಾರಣ ಎಂದ. ಅಗ್ನಿ ಸದಾ ಬದಲಾಗುತ್ತಿದ್ದುದನ್ನು ಅವನು ಕಂಡ. ಜಗತ್ತಿನ ವಸ್ತುಗಳು ಸದಾ ಬದಲಾಗುತ್ತಿದ್ದುದನ್ನು ಅವನು ಕಂಡದ್ದೇ ಅವನು ಅಗ್ನಿ ಸಿದ್ಧಾಂತವನ್ನು ಮಂಡಿಸಲು ಕಾರಣವಾಯಿತು. "ನಾವು ಕಾಣುತ್ತಿರುವ ಯಾವುದೂ ಸ್ಥಿರವಲ್ಲ. ಆದ್ದರಿಂದ ಬದಲಾವಣೆಯೇ ಈ ಸೃಷ್ಟಿಗೆ ಕಾರಣ" ಎಂದ. "ನೀವು ಒಂದೇ ನದಿಗೆ ಎರಡು ಸಲ ಕಾಲಿಡಲಾರಿರಿ, ಏಕೆಂದರೆ ಅದರ ನೀರು ಹರಿಯುತ್ತಲೇ ಇರುತ್ತದೆ" ಎಂಬ ಅವನ ಪ್ರಖ್ಯಾತವಾದ ಹೇಳಿಕೆ, ಬೌದ್ಧರ ಕ್ಷಣಿಕ ವಾದವನ್ನು ನೆನಪಿಗೆ ತರುತ್ತದೆ.

ಸೃಷ್ಟಿಯಲ್ಲಿ ಯಾವುದೂ ಬದಲಾಗುವುದು ಸಾಧ್ಯವೇ ಇಲ್ಲ ಎಂದು ವಾದಿಸುವ ಗ್ರೀಕ್ ಚಿಂತಕರು ಅನಂತರ ಕಾಣಿಸಿಕೊಂಡರು. ಅವರಲ್ಲಿ ಮುಖ್ಯನಾದವನು ಪರ್ಮನೈಡಿಸ್. ಮುಂದೆ ನಡೆದದ್ದು, ಈ ಬದಲಾವಣೆಯಾದದ್ದು ಮತ್ತು ಬದಲಾವಣೆಯಾಗುತ್ತಲೇ ಇರುವಂಥದು ಎಂಬ ಪ್ರಮೇಯಗಳನ್ನು ಸಮನ್ವಯಗೊಳಿಸುವ ಪ್ರಯತ್ನ. ಈ ಪ್ರಯತ್ನದಲ್ಲಿ ಅವರು ಈ ವಿಶ್ವವು ಪೃಥ್ವಿ, ವಾಯು, ಅಗ್ನಿ ಮತ್ತು ಜಲ ಎಂಬ "ವಸ್ತುಗಳ ಬೇರು" ಅಥವಾ ಘಟಕಗಳಿಂದ (ಭೂತ) ಆಗಿದೆ ಎಂಬ ತೀರ್ಮಾನಕ್ಕೆ ಬಂದರು. ಈ ಭೂತಗಳು ಬದಲಾಗುವುದಿಲ್ಲ, ಆದರೆ ಒಂದು ಮತ್ತೊಂದರಲ್ಲಿ ಬೆರೆಯುತ್ತದೆ ಎಂದರು. ಅವು ಕೂಡುವುದು "ಪ್ರೇಮ"ದಿಂದ, ಬೇರಾಗುವುದು "ದ್ವೇಷ"ದಿಂದ ಎಂದೂ ವಾದಿಸಿದರು. ಹೀಗೆಯೇ ಮುಂದುವರಿಯುತ್ತಾ ಅವರು, "ಪರಮಾಣು" (atom) ವಾದವನ್ನು ತಲುಪಿದರು. ಪ್ರತಿಯೊಂದು ಪರಮಾಣುವಿನಲ್ಲಿಯೂ "ಚಲನೆ" (motion) ಇದೆ, ಅವು ಒಂದೊಂದೂ ಪರಸ್ಪರ ಕೂಡುತ್ತವೆ ಎಂದರು. ಈ ತೀರ್ಮಾನಕ್ಕೆ ಬರಲು ೨೫೦ ವರ್ಷಗಳೇ ಬೇಕಾದವು.

ಮುಂದಿನ ಅತಿ ಮುಖ್ಯ ಚಿಂತಕ **ಪ್ಲೇಟೋ**. ಜಗತ್ತಿನ ಅತ್ಯಂತ ಶ್ರೇಷ್ಠ ಚಿಂತಕರಲ್ಲಿ ಒಬ್ಬನೆಂದು ಪರಿಗಣಿತನಾಗಿರುವ ಪ್ಲೇಟೋ ಸೃಷ್ಟಿಯ ವಿಷಯದಲ್ಲಿ ಒಂದು ವಿಚಿತ್ರ ವಾದವನ್ನು ಮಂಡಿಸಿದ. ನಾವು ಕಾಣುತ್ತಿರುವುದು ನಿಜವಾದ ಜಗತ್ತಲ್ಲ. ನಿಜವಾದ ಜಗತ್ತಿನ ಒಂದು ಪ್ರತಿ (copy) ಎಂಬುದು ಆ ವಾದ. ಮೂಲದ್ದು "ಭಾವನೆಗಳ ಜಗತ್ತು" (the world of ideas). ನಿಜವಾದ ಜಗತ್ತಿನಲ್ಲಿ ಭಾವನೆಗಳು ಅಥವಾ ರೂಪಗಳು (ideas of forms) ಎಲ್ಲವೂ ಪರಿಪೂರ್ಣವಾಗಿರುತ್ತವೆ, ಯಾವಾಗಲೂ ಬದಲಾಗುವುದಿಲ್ಲ, ಮಾಸುವುದಿಲ್ಲ, ಸಾಯುವುದಿಲ್ಲ, ಎಂದೆಂದಿಗೂ ಹಾಗೆಯೇ ಇರುತ್ತವೆ. ಪ್ಲೇಟೋ ಪ್ರಕಾರ ನಿಜವಾದ ಜಗತ್ತಿನ ಈ ಭಾವನೆಗಳು ಮತ್ತು ರೂಪಗಳು ಎಂದೂ ಸೃಷ್ಟಿಯಾಗಲಿಲ್ಲ. ಅವು ಈಗಿರುವಂತೆಯೇ ಎಂದೆಂದಿಗೂ ಇವೆ. ನಾವು ಅನುಭವಕ್ಕೆ ತಂದುಕೊಳ್ಳುತ್ತಿರುವ ಈ ಜಗತ್ತಿನ ವಸ್ತುಗಳು ಆ ಮೂಲವಸ್ತುಗಳ ಪ್ರತಿಫಲನಗಳು. ಮೂಲ ಜಗತ್ತಿನಲ್ಲಿ ಅವು ಅತ್ಯಂತ ಕ್ರಮವಾಗಿ ಜೋಡಿಸಲ್ಪಟ್ಟಿವೆ. ಅವುಗಳಲ್ಲಿ ಅತ್ಯುತ್ತಮವಾದ ಭಾವನೆಯೆಂದರೆ ಪರಿಪೂರ್ಣ ಒಳ್ಳೆಯತನ (perfect goodness).

ಹಾಗಾದರೆ ಜಗತ್ತಿನ ಭೌತವಸ್ತುವೆಂದರೆ, "ಯಾವುವು ಭಾವನೆಗಳಲ್ಲವೋ ಅವೆಲ್ಲ ಭೌತವಸ್ತುವೇ". ಈ ಭೌತವಸ್ತುಗಳು ಸೃಷ್ಟಿಸಲ್ಪಟ್ಟವು. ಹೀಗೆ ಪ್ಲೇಟೋ ಈ ಜಗತ್ತು ಸೃಷ್ಟಿಸಲ್ಪಟ್ಟದ್ದು ಎಂಬುದನ್ನು ಒಪ್ಪುತ್ತಾನೆ; ಶಿಲ್ಪಿ ಕಲ್ಲಿನಿಂದ ವಿಗ್ರಹವನ್ನು ಮಾಡಿದಂತೆ ಈ ಜಗತ್ತು ಮಾಡಲ್ಪಟ್ಟಿದೆ ಎಂದು ಅಭಿಪ್ರಾಯಪಡುತ್ತಾನೆ.

ಪ್ಲೇಟೋನ ಶಿಷ್ಯ, ಜಗತ್ತಿನ ಅತ್ಯಂತ ಶ್ರೇಷ್ಠ ತತ್ವಜಿಜ್ಞಾಸುಗಳಲ್ಲಿ ಒಬ್ಬ ಅರಿಸ್ಟಾಟಲ್. ಆತ ಪರಿಪೂರ್ಣವೂ, ಬದಲಾವಣೆಯಿಲ್ಲದ್ದೂ, ನಿತ್ಯವೂ ಆದ "ಭಾವನೆಗಳು" ನಿರ್ಜೀವವಾದ ಭೌತದ್ರವ್ಯದ ಮೇಲೆ ಮುದ್ರೆಯೊತ್ತುವಂತೆ ಮಾಡುವುದು ಹೇಗೆ ಸಾಧ್ಯ ಎಂದು ಚಿಂತಿಸಿದ. ಅದಕ್ಕೆ ಅವನು ನೀಡಿದ ಪರಿಹಾರ, "ರೂಪ"ಗಳು ವಸ್ತುಗಳ ಹೊರಗಾಗಲಿ, ಮೇಲಾಗಲಿ ಇಲ್ಲ; ಅವು ವಸ್ತುಗಳನ್ನು ಮೀರಿದವಲ್ಲ, ವಸ್ತ್ವತೀತ (transcendent) ಅಲ್ಲ, ಅವು ವಸ್ತುಗಳಲ್ಲೇ 'ಇವೆ' ಎಂಬುದು. ಎಂದರೆ, ಪ್ಲೇಟೋ ಹೇಳಿದಂತೆ ಈ ಜಗತ್ತು ಇನ್ನೊಂದು ಜಗತ್ತಿನ ಪ್ರತಿ ಅಲ್ಲ, ಇದೇ ನಿಜವಾದ ಜಗತ್ತು. ಈ ವಸ್ತು ಮತ್ತು ರೂಪ ಸೃಷ್ಟಿಸಲ್ಪಟ್ಟವೂ ಅಲ್ಲ, ವಿನಾಶ ಹೊಂದುವಂಥವೂ ಅಲ್ಲ. ಹೀಗಾಗಿ ಇಡೀ ವಿಶ್ವವು, ಭೌತದ್ರವ್ಯವು ವಿವಿಧ



ಪ್ಲೇಟೋ–ಅರಿಸ್ಟಾಟಲ್

ರೂಪಗಳನ್ನು ತಳೆಯಲು ನಡೆಸುತ್ತಿರುವ ನಿರಂತರ ಪ್ರಯತ್ನ; ಅದು ಏನೇನು ಆಗಲು ಸಾಧ್ಯವೋ ಅದು ಆಗಲು ನಡೆಸುತ್ತಿರುವ ಪ್ರಯತ್ನ ಎಂದು ವಿವರಿಸಿದ.

ಮುಂದೆ ಎಪಿಕ್ಯೂರಿಯನ್ನರು ಈ ವಿಶ್ವ ಕೇವಲ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂದಿತು ಎಂದು ವಾದಿಸಿದರು. ಅವರಿಗೂ ಮುಂದೆ ಬಂದ ಸಂಯಮವಾದಿಗಳಿಗೂ (stoics) ಸೌಶೀಲ್ಯವೇ ಪರಮ ಶ್ರೇಷ್ಠ ತತ್ತ್ವ. ಹಾಗೆ ಭಾವಿಸಿ, ಇಂದ್ರಿಯ ಸಂಯಮದಿಂದ ಸುಖದುಃಖಗಳಿಗೆ ಉದಾಸೀನರಾಗಿರಬೇಕೆಂಬ ಪಂಥದವರಿಗೆ ಜಗತ್ತಿನ ಸ್ವರೂಪಕ್ಕಿಂತ ನೀತಿ ನಿಯಮಗಳು ಮುಖ್ಯವಾದುವು. ಆದರೂ ಜಗತ್ತಿನ ಸ್ವರೂಪವನ್ನು ತಿಳಿಯದೆ ಜೀವನವನ್ನು ರೂಪಿಸುವುದು ಹೇಗೆ ಎಂದು ಚಿಂತಿಸಿ ಅದರ ಸ್ವರೂಪದ ಕಡೆ ಗಮನಕೊಟ್ಟರು, ಅಗ್ನಿಯೇ ಜಗತ್ತಿನ ಮೂಲತತ್ತ್ವ ಎಂದರು. ಅನಂತರ ಬಂದ ಸಂದೇಹವಾದಿಗಳು (sceptics) ನಮ್ಮ ಇಂದ್ರಿಯಗಳು ಪರಸ್ಪರ ವಿರುದ್ಧವಾದ ವರದಿಗಳನ್ನು ನೀಡುತ್ತಿರುವುದರಿಂದ ವಸ್ತುಗಳ ಸ್ವರೂಪವನ್ನು ಅರಿಯುವುದು ಅಸಾಧ್ಯ ಎಂದರು.

ಒಂಬತ್ತನೆಯ ಶತಮಾನದ ಮಧ್ಯಭಾಗದ ಕ್ರೈಸ್ತ ಚಿಂತಕರು ದೇವರು ಈ ಜಗತ್ತನ್ನು ಶೂನ್ಯದಿಂದ ಅಥವಾ ಪ್ರಥಮ ಕಾರಣವಾದ ತನ್ನಿಂದ ಸೃಷ್ಟಿಸಿದ ಎನ್ನುವ ಬೇರೊಂದು ವಾದವನ್ನು ಮುಂದಿಟ್ಟರು. ಆಮೇಲೆ ಬಂದ ಕ್ರೈಸ್ತ ಚಿಂತಕರು ಎಲ್ಲ ಸಾಮಾನ್ಯಗಳೂ (universals) ದೇವರ ಮನಸ್ಸಿನಲ್ಲಿದ್ದುವು ಎಂದರು. ಮುಂದೆ ಡಾರ್ವಿನ್ನನ ವಿಕಾಸವಾದವು ಭದ್ರವಾಗಿ ಬೇರೂರುವವರೆಗೂ ಸೃಷ್ಟಿಯನ್ನು ಕುರಿತಂತೆ ಇಂತಹ ಅನೇಕ ವಾದಗಳು –ಹೆಚ್ಚು ಕಡಿಮೆ ಅಸಮರ್ಪಕವಾದವು– ಅಸ್ತಿತ್ವದಲ್ಲಿದ್ದುವು.

### ಮನಸ್ಸು ಮತ್ತು ಭೌತದ್ರವ್ಯಗಳ ಸಂಬಂಧ

ನಾವು ದೃಷ್ಟಿ ಹಾಯಿಸಬಹುದಾದಷ್ಟು ಹಿಂದಿನ ಕಾಲದಿಂದಲೂ ಮಾನವನು ಜಡ ಮತ್ತು ಚೇತನಗಳ ನಡುವೆ ವ್ಯತ್ಯಾಸವನ್ನು ಗುರುತಿಸುತ್ತಾ ಬಂದಿದ್ದಾನೆ. ಮಣ್ಣಿನಿಂದ ಮಡಕೆ ಮಾಡಬಹುದು. ಎಂದರೆ ಮಣ್ಣನ್ನು ಮಡಕೆಯಾಗಿ ಪರಿವರ್ತಿಸಬಹುದು. ಆ ಪರಿವರ್ತನೆಯ ಸ್ಥಿತಿಯಲ್ಲಿ ಮಣ್ಣಿಗೆ ತನಗೇನಾಗುತ್ತಿದೆ ಎಂಬುದು ತಿಳಿಯುವುದಿಲ್ಲ. ಅಥವಾ ಮಡಕೆಗಾದರೂ ತನಗೇನಾಯಿತು ಎಂಬುದು ತಿಳಿಯುವುದಿಲ್ಲ. ಆದರೆ ಮನುಷ್ಯನಿಗೆ ಒಂದು ಮುಳ್ಳು ಚುಚ್ಚಿದರೆ, ಇಲ್ಲವೇ ಸ್ವಲ್ಪ ಬೆಂಕಿ ತಗುಲಿದರೆ ತನಗೆ ಏನೋ ಆಯಿತು ಅಥವಾ ಆಗುತ್ತಿದೆ ಎಂಬುದು ತಿಳಿಯುತ್ತದೆ. ಈ ವ್ಯತ್ಯಾಸ ಮಾನವರಿಗೆ ಹಿಂದಿನಿಂದಲೂ ತಿಳಿದು, ತನಗೆ ಏನಾಯಿತು ಎಂಬುದು ತಿಳಿಯದ್ದನ್ನು **ಜಡ** ಎಂದೂ, ಏನಾಯಿತು ಎಂಬುದನ್ನು ತಿಳಿದದ್ದನ್ನು **ಚೇತನ** ಎಂದೂ ಕರೆದು, ಅವೆರಡರ ನಡುವೆ ವ್ಯತ್ಯಾಸವನ್ನು ಗುರುತಿಸಿದರು. ಅಷ್ಟೇ ಅಲ್ಲ, ಚೇತನವು ಜಡಕ್ಕಿಂತ ಹೆಚ್ಚಿನದು ಎಂದೂ ತಿಳಿದರು.

ಈ ಜಡ–ಚೇತನಗಳ ಸಂಬಂಧವು ಅಸ್ಪಷ್ಟವಾಗಿ ದೇಹ–ಆತ್ಮಗಳ ಸಂಬಂಧದೊಡನೆ ಮೊದಲಿಗೆ ತಳುಕುಹಾಕಲ್ಪಟ್ಟಿತ್ತು. ಮೊದಲಲ್ಲಿ ಮಾನವರು ತಮಗೆ ಆತ್ಮ ಇರುವಂತೆ ಇಡೀ ವಿಶ್ವಕ್ಕೆ ಒಂದು ಆತ್ಮ ಇದೆಯೆಂದೂ, ಅಷ್ಟೇ ಅಲ್ಲದೆ ಬಂಡೆ, ಗಿಡ ಮರ ನದಿ ಇವೆಲ್ಲಕ್ಕೂ ಆತ್ಮ ಇದೆಯೆಂದೂ ನಂಬಿದ್ದರು. ಅವುಗಳನ್ನೆಲ್ಲ ದೇವರು ಆಳುತ್ತಾನೆಂದೂ ನಂಬಿದ್ದರು.

ಪ್ರಾಚೀನ ಗ್ರೀಕ್ ಚಿಂತಕರಲ್ಲಿ ಒಬ್ಬನಾದ ಅನಕ್ಸಾಗರಸ್, ಕ್ರಿ. ಪೂ. ೫ ನೆಯ ಶತಮಾನದಲ್ಲೇ ಎಲ್ಲ ಚಲನೆಯೂ ಚೇತನದಿಂದಲೇ – ಅದನ್ನು ಅವನು ನೌಸ್ (nous) ಎಂದು ಕರೆದ – ನಡೆಯುತ್ತದೆ ಎಂದು ಹೇಳಿದ. ಆ ನೌಸ್ ಎಂಬುದು ಎಲ್ಲ ವಸ್ತುಗಳೂ ಚಲಿಸುವಂತೆ ಮಾಡುವುದು ಮಾತ್ರವಲ್ಲದೆ ಭೂತ, ವರ್ತಮಾನ, ಭವಿಷ್ಯಗಳೆಲ್ಲ ಅದಕ್ಕೆ ತಿಳಿದಿರುತ್ತದೆಯೆಂದೂ, ಎಲ್ಲ ವಸ್ತುಗಳ ಮೂಲಕಾರಣ ಅದೇ ಎಂದೂ ಹೇಳಿದ. ಆದರೆ ಅವನ ದೃಷ್ಟಿಯಲ್ಲಿ ವ್ಯಕ್ತಿಗತ ಆತ್ಮ ಅಥವಾ ಚೇತನ ಎಂಬುದು ಇರಲಿಲ್ಲ. ಅದೊಂದು ವಿಶ್ವಚೇತನ (world mind), ಅದು ವಿಶ್ವದ ಬೇರೆ ಬೇರೆ ವಸ್ತುಗಳಿಗಿಂತ ಭಿನ್ನವಾಗಿದ್ದು ಅವುಗಳ ಚಾಲನಶಕ್ತಿಯಾಗಿದೆ

ಎಂದು ಹೇಳಿದ. ಆ ವಿಶ್ವಮನಸ್ಸು ಅಥವಾ ವಿಶ್ವಚೇತನ ಎಲ್ಲ ವಸ್ತುಗಳನ್ನೂ ಆಳುತ್ತದೆ. ಈ ಭೌತವಸ್ತುಗಳೊಡನೆ ಬೆರೆತು ಕೊಳ್ಳುವುದಿಲ್ಲ. ಈ ಜಗತ್ತನ್ನು ಆರಂಭಗೊಳಿಸಿದ್ದು ಅದೇ; ಅದು ಹೇಗೋ ಜಗತ್ತಿನಲ್ಲೇ ಇದೆ. ಇದು ಅವನ ಅಭಿಪ್ರಾಯ.

ಸೋಫಿಸ್ಟರು, ಈ ಜಗತ್ತಿನ ಮೂಲಕಾರಣವನ್ನು ಕಂಡು ಹಿಡಿಯುವ ಪ್ರಯತ್ನವು ವ್ಯರ್ಥ ಎಂದು ಹೇಳಿದರೂ ಅವರು ಮಾನವನ ಮೇಲೆ, ಅದರಲ್ಲೂ ಅವನ ಚೇತನದ ಮೇಲೆ ತಮ್ಮ ಗಮನವನ್ನೆಲ್ಲ ಕೇಂದ್ರೀಕರಿಸಿದರು. ಉಳಿದೆಲ್ಲವೂ ಮಾನವನ ಚೇತನದ ಸುತ್ತವೇ ಸುತ್ತುತ್ತಿರುವುದು ಎಂದೂ ಅವರು ಭಾವಿಸಿದರು. ಅವರ ಪ್ರಕಾರ ಸತ್ಯ ಎಂಬುದಕ್ಕೆ ಮಾನವನ ಮನಸ್ಸೇ ಪ್ರಮಾಣ. ಪ್ರತಿಯೊಬ್ಬ ವ್ಯಕ್ತಿಯ ಮನಸ್ಸು ಯಾವುದನ್ನು ಸತ್ಯ ಎನ್ನುತ್ತದೆಯೋ ಅದೇ ಸತ್ಯ. ಹೀಗೆ ಸೋಫಿಸ್ಟರು ಚೇತನ ಮತ್ತು ಜಡಗಳ ನಡುವೆ ವ್ಯತ್ಯಾಸ ಇದೆ ಎನ್ನುವುದನ್ನು ಒಪ್ಪಿದರು; ಹಾಗೆಯೇ ಮಾನವನ ಮನಸ್ಸು ಅಥವಾ ಚೇತನವೇ ಎಲ್ಲವನ್ನೂ ನಿರ್ಣಯಿಸತಕ್ಕದ್ದು ಎಂಬುದನ್ನೂ ಮನಗಂಡರು.

ಪ್ಲೇಟೋ ಪ್ರಕಾರ, ಅವನು ಆತ್ಮ ಎಂದು ಕರೆಯುವ ಚೇತನವೇ ಜ್ಞಾನದ ಮೂಲ ಕೇಂದ್ರ. ಮನಸ್ಸು ದೇಹಕ್ಕೆ ಇಡಲ್ಪಡುವ ಮುನ್ನವೇ ಅದರಲ್ಲಿ ಭಾವನೆಗಳನ್ನು ಇಡಲಾಗುತ್ತದೆ, ಹುಟ್ಟು ಎಂಬುದು ಮನಸ್ಸನ್ನು ಮುಚ್ಚಿಬಿಡುತ್ತದೆ, ಹೀಗಾಗಿ ವ್ಯಕ್ತಿಯು ಹುಟ್ಟಿದ ಕೂಡಲೇ ತನಗೆ ತಿಳಿದಿದ್ದುದನ್ನೆಲ್ಲವನ್ನೂ ಮರೆತುಬಿಡುತ್ತಾನೆ ಎಂದು ಅವನು ಹೇಳಿದ. ಆದರೆ ಪ್ರಶ್ನಿಸುತ್ತಲೇ ಹೋಗುವ ವಿಧಾನದಿಂದ, ಹುಟ್ಟುವುದಕ್ಕೆ ಮುಂಚೆ ಮನಸ್ಸಿಗೆ ಏನೇನು ಗೊತ್ತಿತ್ತೊ ಅದನ್ನು ನೆನಪು ಮಾಡಿಕೊಳ್ಳುವಂತೆ ಮಾಡಬಹುದು ಎಂದೂ ಅವನು ನಂಬಿದ್ದ. ಹುಟ್ಟುವುದಕ್ಕೆ ಮುಂಚೆ ಇದ್ದ ನೆನಪುಗಳಿಗೆಲ್ಲ ಮನಸ್ಸೇ ಆಶ್ರಯಕೇಂದ್ರ ಎಂದೂ ಅವನು ನಂಬಿದ್ದ. ಈ ಜಗತ್ತು ಎರಡು ತತ್ವಗಳಿಂದಾಗಿವೆ ಎಂಬುದು ಪ್ಲೇಟೋವಿನ ದೃಢ ಅಭಿಪ್ರಾಯ. ಮನಸ್ಸು/ಚೇತನ ಮತ್ತು ಜಡ/ಭೌತವಸ್ತು. ಚೇತನ ಜಡದಿಂದ ಬೇರೆಯಾದದ್ದು. ಚೇತನವು ಜಡದ ಜತೆ ಬೆರೆತಿರುವುದರಿಂದ ಜಡದ ಭಾರವನ್ನು ಹೊರಬೇಕಾಗಿದೆ. ಚೇತನವೊಂದೇ ಸತ್ಯವಾದದ್ದು – ಅದು ಈ ವಿಶ್ವದ ಕಾನೂನು – ಸುವ್ಯವಸ್ಥೆಗಳ ತತ್ವ

ಮುಂದೆ ಕ್ರೈಸ್ತ ಧರ್ಮವು ಭೌತದ್ರವ್ಯ ಅಥವಾ ಜಡವಸ್ತುವು ಎಲ್ಲ ಪಾಪಗಳ ಮೂಲ ಎಂದು ಸಾರಿತು. ಚೇತನವನ್ನು ಬಂಧಿಸಿಟ್ಟಿರುವುದೇ ಜಡವಸ್ತು, ಆದ್ದರಿಂದ ಚೇತನ ಅಥವಾ ಆತ್ಮಕ್ಕೆ ಮುಕ್ತಿ ಬೇಕಾದರೆ ಅದು ಜಡವನ್ನು ತ್ಯಜಿಸಬೇಕು, ಅಲ್ಲದೆ ಅದನ್ನು ನಿವಾರಿಸಬೇಕೆಂದು ಹೇಳಿತು.

ಅಗಸ್ಟೈನ್ ಪ್ರಕಾರ ಸತ್ಯ ಎಂಬುದು ಮಾನವ ಚೇತನದ ಸೃಷ್ಟಿ ಅಲ್ಲ; ಸತ್ಯದ ಮೂಲ ದೇವರು. ಮಧ್ಯಕಾಲೀನ ಕ್ರೈಸ್ತರು ಮನಸ್ಸು/ಚೇತನ ದುರ್ಬಲ, ಅದಕ್ಷ ಉಪಕರಣ ಎಂದರು. ಅದರ ದೋಷಗಳು ಹಲವಾರು. ವಿಚಾರ ಮಾಡಲು ಅದನ್ನು ಬಳಸಬಹುದು; ಆದರೆ ಅಂತಿಮ ನಿರ್ಣಯಗಳು ದಿವ್ಯಶಕ್ತಿಯದೇ ಎಂದು ಅಭಿಪ್ರಾಯಪಟ್ಟರು.

ಮುಂದೆ ವಿಚಾರಕ್ಕೆ ಪ್ರಾಶಸ್ತ್ಯ ದೊರಕಿತು. ರೋಜರ್ ಬೇಕನ್ ಮಧ್ಯಕಾಲೀನ ಸಂನ್ಯಾಸಿ ಮತ್ತು ಆಧುನಿಕ ವಿಜ್ಞಾನಿ ಇವುಗಳ ವಿಚಿತ್ರ ಮಿಶ್ರಣವಾಗಿದ್ದನು. ಅವನು ವಿಚಾರದ ಆವಶ್ಯಕತೆಯನ್ನು ಒತ್ತಿ ಹೇಳಿದ. ಚೇತನವು ಜಡವನ್ನು ನಿಯಂತ್ರಿಸಬಲ್ಲುದು ಎಂದೂ ಹೇಳಿದ. ಫ್ರಾನ್ಸಿಸ್ ಬೇಕನ್ ಮಾನವ ಮನಸ್ಸು ಮತ್ತು ಆಧುನಿಕ ವಿಜ್ಞಾನ ಎರಡೂ ಶಕ್ತಿಪೂರ್ಣ ಎಂದ.

ಮುಂದಿನ ಆಧುನಿಕರು ಮನಸ್ಸು/ಚೇತನ ಮತ್ತು ಭೌತ ವಸ್ತುಗಳನ್ನು ಕುರಿತು ಬೇರೆ ಬೇರೆ ರೀತಿಯಾಗಿ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಈ ಚರ್ಚೆ ಎಲ್ಲಿಗೆ ಒಯ್ಯುವುದೆಂದು ಊಹಿಸುವುದು ಕಷ್ಟ

### ಭಾವನೆಗಳು ಮತ್ತು ಆಲೋಚನೆಗಳು

ಭಾವನೆಗಳು ನಮಗೆ ಎಲ್ಲಿಂದ ಬರುತ್ತವೆ? ಅವು ನಾವು ಹುಟ್ಟುವಾಗಲೇ ನಮ್ಮ ಜೊತೆ ಹುಟ್ಟುತ್ತವೆಯೇ? ಹುಟ್ಟಿ ಕಾಲಕ್ರಮದಲ್ಲಿ ನಮ್ಮ ಅರಿವಿಗೆ ಬರುತ್ತವೆಯೆ? ಅಥವಾ ಇಂದ್ರಿಯಾನುಭವಗಳಿಂದ ನಮಗೆ ದೊರಕುತ್ತವೆಯೆ? ಇಲ್ಲವೇ ಯಾರೋ ಒಬ್ಬ ದೇವರು ನಮಗೆ ಅವನ್ನು ನೀಡುತ್ತಾನೆಯೆ? ವಿಚಾರದ ನಿಯಮಗಳೇನು? ಪ್ರತಿಯೊಂದು ಯುಗದ ಚಿಂತಕರೂ ಚಿಂತನೆ ನಡೆಸುವುದು ಯಾವುದರ ಆಧಾರದ ಮೇಲೆ?

ಪ್ರಾಚೀನ ಮಾನವರು ತಮ್ಮ ಸುತ್ತ ಇದ್ದ ಒಳ್ಳೆಯ ಮತ್ತು ಕೆಟ್ಟ ಅದೃಶ್ಯಶಕ್ತಿಗಳಿಂದ (spirits) ತಮಗೆ ಭಾವನೆಗಳು ಬರುತ್ತವೆ ಎಂದು ನಂಬಿದ್ದರು. ದೇವರು ಅಥವಾ ಒಳ್ಳೆಯ ಶಕ್ತಿಗಳು ಒಳ್ಳೆಯ ಭಾವನೆಗಳನ್ನು, ದುಷ್ಟಶಕ್ತಿಗಳು ಕೆಟ್ಟ ಭಾವನೆಗಳನ್ನೂ ತಮಗೆ ಕೊಡುತ್ತವೆ ಎಂಬುದು ಅವರ ನಂಬಿಕೆಯಾಗಿತ್ತು. ಎಂದರೆ ತಮ್ಮ ಭಾವನೆಗಳು ತಮಗಿಂತ ಹೊರಗಿನ ಒಂದು ಮೂಲದಿಂದ ಬರುತ್ತವೆ ಎಂಬುದನ್ನು ಅವರು ನಂಬುತ್ತಿದ್ದರು.

ಆದರೆ, ಇದೊಂದು ಅಂಶದಲ್ಲಿ ಮಾತ್ರ, ತತ್ವಶಾಸ್ತ್ರದ ಇತಿಹಾಸ ದಲ್ಲಿ, ಅತಿಪ್ರಾಕೃತಿಕ ಅಂಶವನ್ನು ಬಹುಬೇಗನೆ ಕೈಬಿಟ್ಟು ಭಾವನೆಗಳ ಮೂಲವನ್ನು ಪ್ರಾಕೃತಿಕದಲ್ಲಿಯೇ ಹುಡುಕಲು ತೊಡಗಿದ್ದು ಕಂಡುಬರುತ್ತದೆ.

ಪ್ರಾಚೀನ ಗ್ರೀಕ್ ತತ್ವಚಿಂತಕರು ಬಾಹ್ಯ ವಸ್ತುಗಳ ಮೂಲ ಸಾಮಗ್ರಿ ಏನು ಎಂಬುದರ ವಿಷಯದಲ್ಲಿ ಚಿಂತನೆ ನಡೆಸಿದರೇ ಹೊರತು ಮಾನವ ಮತ್ತು ಅವನ ಚಿಂತನೆಗಳಿಗೆ ಗಮನ ಕೊಡಲಿಲ್ಲ. ಅವರಲ್ಲಿ ಹೆರಕ್ಲಿಟಸ್ ಮಾತ್ರ ಆಲೋಚನೆಯ ಸಮಸ್ಯೆಗೆ ಗಮನ ಕೊಟ್ಟ. ಇಂದ್ರಿಯಗಳು ಗ್ರಹಿಸುವುದಕ್ಕಿಂತ ಹೆಚ್ಚಾಗಿ ಆಲೋಚನೆ ಎಂಬುದೇ ಜ್ಞಾನದ ಖಚಿತವಾದ ಮೂಲ ಎಂಬುದು ಅವನಿಗೆ ಹೊಳೆದಿತ್ತು. ವಿಚಾರಪೂರ್ಣವಾದ ಜೀವನವೇ ಅತ್ಯುತ್ತಮ ಜೀವನ ಎಂಬುದೂ ಅವನ ಭಾವನೆಯಾಗಿತ್ತು. ಅವನ ಪ್ರಕಾರ ವೈಚಾರಿಕತೆ ಎಂದರೆ ದೈವೀ ವೈಚಾರಿಕತೆ, ಮಾನವನಲ್ಲಿರುವ ದಿವ್ಯತೆಯ ಕಿಡಿ. ಅದು ವೈಚಾರಿಕತೆಯ ಶಕ್ತಿ ಇಲ್ಲದ ಮಾನವನು ನೋಡಲು ಸಾಧ್ಯವಿಲ್ಲದ ರೀತಿಯಲ್ಲಿ ಸತ್ಯವನ್ನು ನೋಡಲು ಶಕ್ತವಾದದ್ದು. ಮಾನವರು ಬದುಕುತ್ತಿರುವುದು ರಾಗದ್ವೇಷಗಳಿಂದಲೇ ಹೊರತು ವೈಚಾರಿಕತೆಯಿಂದಲ್ಲ ಎಂದು ಅವನು ಹೇಳುತ್ತಾನೆ.

ಸಾಕ್ರೆಟೀಸ್ ಜ್ಞಾನದ ಸಮಸ್ಯೆಯೇ ಎಲ್ಲ ಸಮಸ್ಯೆಗಳ ಕೀಲಿಕೈ ಎಂದ. ಜ್ಞಾನಮೀಮಾಂಸೆಯನ್ನು ಕುರಿತು ಸಂಪೂರ್ಣವಾದ ಪ್ರಮೇಯವನ್ನು ಮಂಡಿಸಿದ ಮೊದಲ ತಾತ್ವಿಕರಲ್ಲಿ **ಪ್ಲೇಟೋ**